**ದಿನಾಂಕಃ 24–11–2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ ಎನ್ ಎಮ್ ಎಮ್ ವಕೀಲರಿಂದಃ**

ನಾನು ಶಾಲೆ ಕಲಿತಿಲ್ಲ. ನನಗೆ 29 ವಯಸ್ಸು ಆಗಿತ್ತು ಎಂದು ಬರೆಸಿದ್ದು ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಮುಂಚೆ ನಾನು ಕೂಲಿ ಕೆಲಸ ಮಾಡಿಕೊಂಡು ಇರುತ್ತಿದ್ದೆ ಎಂದರೆ ಸರಿ. ನನಗೆ ಈಗ ಕೆಲಸ ಮಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿ ದಿವಸ 1 ರಿಂದ 1,500/– ರೂ. ದುಡಿಯುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ದಾಖಲೆ ಹಾಜುರಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುತ್ತೇನೆ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ದಿನದಂದು ನಾನು ಮಕ್ಕಳಿಗೆ ಬ್ಯಾಗ ತರಲು ರಾಣೇಬೆನ್ನೂರು ಬಸ್ಸನ್ನು ಹತ್ತುತ್ತಿದ್ದೇನು. ಆ ಸಂದರ್ಭದಲ್ಲಿ ಅಪಘಾತವಾಗಿದೆ. ಆ ದಿನದಂದು ನನ್ನ ಜೊತೆ ಇದ್ದ ನನ್ನ ಗಂಡ ಮತ್ತು ಚಿಕ್ಕಮ್ಮ ಬಸ್ಸನ್ನು ಹತ್ತಿದ್ದಾರೋ ಇಲ್ಲವೋ ಎಂದು ಬಗ್ಗಿ ನೋಡಲು ಹೋಗಿ ನಿಯಂತ್ರಣ ತಪ್ಪಿ ನಾನೇ ಬಿದ್ದು ಗಾಯಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಬಸ್ಸಿನ ಚಾಲಕನ ಯಾವುದೇ ತಪ್ಪು ಇರಲಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದಾಗಿ ನನ್ನ ಬಲಗಾಲಿನ ಹೆಬ್ಬೆರಳು ಕಟ್ಟಾಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದ ತಕ್ಷಣ ನಾನು ರಾಣೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಅಲ್ಲಿ ಪ್ರಥಮ ಚಿಕಿತ್ಸೆ ಪಡೆದುಕೊಂಡು ನಂತರ ಒಂ ಆಸ್ಪತ್ರೆಗೆ ಹೋಗಿರುತ್ತೇನೆ. ಪೋಲಿಸರಿಗೆ ನಾನೇ ದೂರು ಕೊಟ್ಟಿರುತ್ತೇನೆ. ಪಿರ್ಯಾದಿ ಸಲ್ಲಿಸಲು ಒಂದು ದಿನ ವಿಳಂಭವಾಗಿದ್ದು ಯಾವ ಕಾರಣಕ್ಕಾಗಿ ವಿಳಂಭವಾಗಿದೆ ಎಂದು ಸರಿಯಾಗಿ ಕಾರಣಗಳನ್ನು ಅರ್ಜಿಯಲ್ಲಿ ಮತ್ತು ದೂರಿನಲ್ಲಿ ತಿಳಿಸಿಲ್ಲ ಎಂದರೆ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದೆ ಮತ್ತು ನನಗೆ ಆ ಬಗ್ಗೆ ಮಾಹಿತಿ ಇರಲಿಲ್ಲ ಎಂದು ನುಡಿಯುತ್ತಾರೆ.

ನಾನು ಒಂ ಆಸ್ಪತ್ರೆಯಲ್ಲಿ ಸುಮಾರು ಒಂದು ತಿಂಗಳವರೆಗೆ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಲ್ಲಿ ನನಗೆ ಆಪರೇಷನ್ ಮಾಡಿದ್ದಾರೆ. ನನಗೆ ಯಾವುದೇ ರಾಡು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ತೊಂದರೆ ಇಲ್ಲದೇ ಕೆಲಸ ಮಾಡಿಕೊಂಡಿದ್ದೇನೆ ಎಂದರೆ ನನ್ನ ಗಂಡ ನನಗೆ ಸಹಾಯ ಮಾಡುತ್ತಾರೆ ಎಂದು ನುಡಿಯುತ್ತಾರೆ. ನಾನು ಒಂ ಆಸ್ಪತ್ರೆಯನ್ನು ಹೊರತುಪಡಿಸಿ ಬೇರೆ ಯಾವ ಆಸ್ಪತ್ರೆಯಲ್ಲಿಯೂ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿ. ಸದರಿ ಆಸ್ಪತ್ರೆಯಿಂದ ಹೆಚ್ಚಿನ ಅಂಗನ್ಯೂನತೆ ತೋರಿಸಿ ಅಂಗನ್ಯೂನತೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ –17 ಮತ್ತು

18 ಗಳನ್ನು ಸೃಷ್ಟಿಸಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆಗೆಂದು 2 ಲಕ್ಷ ರೂ ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದ ಚಿಕಿತ್ಸೆಗೆ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ಸು ಚಾಲಕನ ತಪ್ಪಿನಿಂದ ಅಪಘಾತವಾಗದೇ ಇರುವುದರಿಂದ ಕೆ ಎಸ್ ಆರ್ ಟಿ ಸಿ ರವರು ನನಗೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನನಗೆ ಸಾದಾ ಸ್ವರೂಪದ ಗಾಯಗಳಾಗಿದ್ದರೂ ಸಹ ತೀವ್ರ ಸ್ವರೂಪದ ಗಾಯಗಳು ಆಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ ಪಿ –20 ಎಕ್ಸರೆ ನನಗೆ ಸಂಬಂದಪಟ್ಟವುಗಳಲ್ಲ ಎಂದರೆ ಸರಿಯಲ್ಲ. ನಿ ಪಿ –20 ವರದಿಯೊಂದಿಗೆ ಹಾಜರುಪಡಿಸಿಲ್ಲ ಆದ ಕಾರಣ ನನಗೆ ಸಂಬಂದಪಟ್ಟ ಎಕ್ಸರೆಗಳು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅದ ಗಾಯಗಳು ಸಂಪೂರ್ಣವಾಗಿ ಗುಣಮುಖವಾಗಿದ್ದರೂ ಸಹ ಅಂಗನ್ಯೂನತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಬಸ್ಸಿನಲ್ಲಿ 20 ಜನರು ಪ್ರಯಾಣೀಕರು ಇದ್ದರು. ನನ್ನ ನಿರ್ಲಕ್ಷತನದಿಂದ ಅಪಘಾತವಾಗಿದ್ದು ಸಹ ಪ್ರಯಾಣಿಕರಿಗೆ ಯಾವುದೇ ಗಾಯಗಳು ಆಗಿಲ್ಲ ಎಂದರೆ ಸರಿಯಲ್ಲ. ಆ ಕಾರಣ ಕೆ ಎಸ್ ಆರ್ ಟಿ ಸಿ ರವರು ಪರಿಹಾರ ಕೊಡಲು ಬರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.